RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ


| ಭಾಗ-V<br>Part-V | ಬೆಂಗಳೂರು, ಮಂಗಳವಾರ, ಜನವರಿ ೩೧, ೨೦೧೭ (ಮಾಘ ೧೧, ಶಕ ವರ್ಷ ೧೯೩೮)<br>Bengaluru, Tuesday, January 31, 2017 (Magha 11, Shaka Varsha 1938) | ನಂ. ೧೨೮<br>No. 128 |
|---|---|---|


ರಿಜಿಸ್ಟ್ರಾರ್ ಜನರಲ್‌ರವರ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ,

ಅಂಬೇಡ್ಕರ್ ವೀಧಿ, ಬೆಂಗಳೂರು – 560 001

**ಅಧಿಸೂಚನೆ**

**ಸಂಖ್ಯೆ: ಸಿಜೆಆರ್‌ಸಿ 1/2017, ಬೆಂಗಳೂರು, ದಿನಾಂಕ 1ನೇ ಫೆಬ್ರವರಿ 2017**

**ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಅಭ್ಯರ್ಥಿಗಳ ನೇಮಕಾತಿ**

**ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 01.03.2017**

ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) ನಿಯಮಗಳು, 2004 ಮತ್ತು 2011 ಮತ್ತು 2015ರ ತಿದ್ದುಪಡಿ ನಿಯಮಗಳ ಉಪಬಂಧಗಳ ಅಡಿಯಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು, ಪ್ರಸ್ತುತ ಇರುವ ಹಾಗೂ ಆನುಷಂಗಿಕ ಖಾಲಿ ಹುದ್ದೆಗಳೂ ಸೇರಿದಂತೆ ಸಿವಿಲ್ ನ್ಯಾಯಾಧೀಶರ (ಆಗಿನ ಸಿವಿಲ್ ನ್ಯಾಯಾಧೀಶ(ಕಿರಿಯ ಶ್ರೇಣಿ) ಹುದ್ದೆ) 167 ಹುದ್ದೆಗಳಿಗೆ ನೇರ ನೇಮಕಾತಿಗಾಗಿ **ಆನ್‌ಲೈನ್ ಅರ್ಜಿಗಳನ್ನು** ಆಹ್ವಾನಿಸಲಾಗಿದೆಯೆಂದು ಈ ಮೂಲಕ ಅಧಿಸೂಚಿಸಿದೆ.

**ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿ:**

**ಎ. ನೇರ ನೇಮಕಾತಿ:**

1. ಭಾರತದಲ್ಲಿನ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯವು ನೀಡಿದ ಕಾನೂನು ಪದವಿಯನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ವಕೀಲರಾಗಿ ನೋಂದಣಿ ಆಗಿರಬೇಕು.
2. ಅಭ್ಯರ್ಥಿಗಳ ವಯಸ್ಸು, ಅರ್ಜಿಗಳನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳ ಸಂದರ್ಭದಲ್ಲಿ 38 ವರ್ಷ ವಯಸ್ಸು ಮತ್ತು ಇತರರ ಸಂದರ್ಭದಲ್ಲಿ 35 ವರ್ಷ ವಯಸ್ಸು ಮೀರಿರಬಾರದು.
3. ಮಾಜಿ–ಸೈನಿಕ ಅಭ್ಯರ್ಥಿಗಳಿಗಾಗಿ, ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷಗಳ ಸಡಿಲಿಕೆ ಇರುತ್ತದೆ.

**ಬಿ. ಸೇವಾ ನಿರತ ಅಭ್ಯರ್ಥಿಗಳ ನೇಮಕಾತಿ:**

1. ಭಾರತದ ಕಾನೂನಿನ ಮೇರೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯವು ನೀಡಿದ ಕಾನೂನು ಪದವಿಯನ್ನು ಹೊಂದಿರಬೇಕು.
2. ಅರ್ಜಿಗಳನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ಕೊನೆಯ ದಿನಾಂಕದಂದು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಕ್ಕೆ ಸಂಬಂಧಿಸಿದ ಅಭ್ಯರ್ಥಿಗಳ ಸಂದರ್ಭದಲ್ಲಿ 43 ವರ್ಷಗಳ ವಯಸ್ಸು ಮತ್ತು ಇತರರ ಸಂದರ್ಭದಲ್ಲಿ 40 ವರ್ಷ ವಯಸ್ಸು ಮೀರಿರಬಾರದು.
3. ಉಚ್ಚ ನ್ಯಾಯಾಲಯದಲ್ಲಿ ಮತ್ತು ಜಿಲ್ಲಾ ನ್ಯಾಯಿಕ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವ ಎಲ್ಲಾ ಸೇವಾನಿರತ ಅಭ್ಯರ್ಥಿಗಳೂ, ಅವರ ವೃಂದ ತಾರತಮ್ಯವಿಲ್ಲದೆ ಎಲ್ಲರೂ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

4. ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯ ನಿರ್ವಹಣೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಸರ್ಕಾರಿ ಪ್ರಾಸಿಕ್ಯೂಟರ್- ಹಾಗೂ -ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳೂ ಸಹ ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**ಟಿಪ್ಪಣಿ: 1.** ಸಿವಿಲ್ ನ್ಯಾಯಾಧೀಶರ ವೃಂದಕ್ಕೆ ಮಾಡುವ ನೇರ ನೇಮಕಾತಿಯು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸುವ, ಭಾರತ ಸಂವಿಧಾನದ 16(4) ಅಥವಾ 16(4ಎ) ಅನುಚ್ಛೇದದ ಅಡಿಯಲ್ಲಿ ಮಾಡಿದ ಯಾವುದೇ ಆದೇಶಕ್ಕೆ ಒಳಪಟ್ಟಿರುತ್ತದೆ.

**2.** ಸಿವಿಲ್ ನ್ಯಾಯಾಧೀಶರ ವೃಂದದ ನೇರ ನೇಮಕಾತಿಗಾಗಿ, ನಿಗದಿಪಡಿಸಿದ ವಿದ್ಯಾರ್ಹತೆಗೊಳಪಟ್ಟು, ಮೂಳೆ ಸಂಬಂಧಿತ (ಆರ್ಥೋಪಿಡಿಕ್) ವಿಕಲಚೇತನ ವ್ಯಕ್ತಿಗಳಿಗಾಗಿ (ಒಂದು ಕೈ (ಓಎ)/ಒಂದು ಕಾಲು (ಓಎಲ್)/ಎರಡೂ ಕಾಲುಗಳು(ಬಿಎಲ್) ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ) 1% (ಶೇಕಡಾ 1) ಮೀಸಲಾತಿಯನ್ನು ನೀಡಲಾಗಿದೆ.

**ವೇತನ ಶ್ರೇಣಿ:** ರೂ.27700-770-33090-920-40450-1080-44770

**ಮೂಲ ವೃಂದದ ಅಡಿಯಲ್ಲಿ ಖಾಲಿ ಹುದ್ದೆಗಳ ವರ್ಗೀಕರಣ**

| ಪ್ರವರ್ಗ | ಮೀಸಲು ರಹಿತ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ವಿಕಲ ಚೇತನರು | ಒಟ್ಟು |
|---|---|---|---|---|---|---|---|
| ಪರಿಶಿಷ್ಟ ಜಾತಿ | 4 | 4 | 1 | 3 | 1 | 2* | 15 |
| ಪರಿಶಿಷ್ಟ ಪಂಗಡ | 1 | 1 | - | - | 1 | - | 3 |
| ಪ್ರವರ್ಗ -I | 1+1* | 1+3* | - | 1+2* | 1* | 1* | 11 |
| ಪ್ರವರ್ಗ- II(ಎ) | 3+3* | 5+12* | 1+2* | 2+10* | 2+3* | 2* | 45 |
| ಪ್ರವರ್ಗ-II (ಬಿ) | - | 2+2* | 1* | 3* | 1+1* | - | 10 |
| ಪ್ರವರ್ಗ-III (ಎ) | 2 | 1 | - | - | 1 | - | 4 |
| ಪ್ರವರ್ಗ-III (ಬಿ) | 1 | 1 | - | 2+2* | 1* | 1 | 8 |
| ಸಾಮಾನ್ಯ ಅಭ್ಯರ್ಥಿ | 10 | 13 | 3 | 11 | 4 | 2+2* | 45 |
| ಒಟ್ಟು | 26 | 45 | 8 | 36 | 16 | 10 | 141 |

(*) ಚಿಹ್ನೆಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

**"ಸ್ಥಳೀಯ ವೃಂದ"ದ ಅಡಿಯಲ್ಲಿ ಖಾಲಿ ಹುದ್ದೆಗಳ ವರ್ಗೀಕರಣ (ಅಂದರೆ ಸಂವಿಧಾನದ 371-(ಜೆ) ಅನುಚ್ಛೇದದಡಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಮೀಸಲಾತಿ)**

| ಪ್ರವರ್ಗ | ಮೀಸಲು ರಹಿತ | ಮಹಿಳಾ ಅಭ್ಯರ್ಥಿ | ಕನ್ನಡ ಮಾಧ್ಯಮ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ವಿಕಲ ಚೇತನರು | ಒಟ್ಟು |
|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 1 | - | 1 | 1 | - | 4 |
| ಪರಿಶಿಷ್ಟ ಪಂಗಡ | - | - | - | - | - | - | - |
| ಪ್ರವರ್ಗ -I | 1* | - | - | 1 | - | - | 2 |
| ಪ್ರವರ್ಗ- II(ಎ) | - | 1 | - | 1+1* | 1 | - | 4 |
| ಪ್ರವರ್ಗ-II (ಬಿ) | 1* | - | - | 1 | - | - | 2 |
| ಪ್ರವರ್ಗ-III (ಎ) | - | 1 | - | - | - | - | 1 |
| ಪ್ರವರ್ಗ-III (ಬಿ) | - | - | - | 1 | - | - | 1 |
| ಸಾಮಾನ್ಯ ಅಭ್ಯರ್ಥಿ | 2 | 3 | 1 | 3 | 1 | 1+1* | 12 |
| ಒಟ್ಟು | 5 | 6 | 1 | 9 | 3 | 2 | 26 |

(*) ಚಿಹ್ನೆಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

**ಟಿಪ್ಪಣಿ:** ಮೇಲ್ಕಂಡ ವರ್ಗೀಕರಣವನ್ನು, ಜಾರಿಯಲ್ಲಿರುವ ಸಂಬಂಧಪಟ್ಟ ಸರ್ಕಾರಿ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ.

**ನೇಮಕಾತಿ ವಿಧಾನ:** ನೇರ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯು ಮೂರು ಹಂತಗಳನ್ನು ಒಳಗೊಂಡಿದ್ದು, ಅವುಗಳೆಂದರೆ, (ಎ) ಪೂರ್ವಭಾವಿ ಪರೀಕ್ಷೆ (ಬಿ) ಮುಖ್ಯ ಪರೀಕ್ಷೆ ಮತ್ತು (ಸಿ) ಮೌಖಿಕ ಪರೀಕ್ಷೆಯಾಗಿದ್ದು, ಉಚ್ಚ ನ್ಯಾಯಾಲಯವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ (ಮುಖ್ಯ ಮತ್ತು ಮೌಖಿಕ) ಪಡೆದ ಒಟ್ಟು ಅಂಕಗಳ ಆಧಾರದ ಮೇಲೆ ನೇರ ನೇಮಕಾತಿಯನ್ನು ಮಾಡಲಾಗುತ್ತದೆ. **ಪೂರ್ವಭಾವಿ ಪರೀಕ್ಷೆಯ ಅಂಕಗಳನ್ನು ಮುಖ್ಯ ಪರೀಕ್ಷೆಗೆ ಅರ್ಹತೆ ಹೊಂದಲು ಮಾತ್ರ ಪರಿಗಣಿಸಲಾಗುತ್ತದೆ.**

(ಎ) **ಪೂರ್ವಭಾವಿ ಪರೀಕ್ಷೆ:**

ಪೂರ್ವಭಾವಿ ಪರೀಕ್ಷೆಯನ್ನು 100 ಅಂಕಗಳಿಗೆ ವಸ್ತುನಿಷ್ಠ ಮಾದರಿಯ ಪ್ರಶ್ನೆ ಪತ್ರಿಕೆಯ ರೂಪದಲ್ಲಿ ನಡೆಸಲಾಗುತ್ತದೆ ಮತ್ತು ಸದರಿ ಪರೀಕ್ಷೆಯ ಪಠ್ಯಕ್ರಮವು ಈ ಕೆಳಕಂಡಂತಿರುತ್ತದೆ, ಎಂದರೆ:-

ಭಾಗ – ಎ : ಸಿವಿಲ್ ಪ್ರಕ್ರಿಯಾ ಸಂಹಿತೆ, 1908;
ವರ್ಗಾವಣೀಯ ಲಿಖಿತಗಳ ಅಧಿನಿಯಮ, 1981;
ಸ್ವತ್ತು ವರ್ಗಾವಣೆ ಅಧಿನಿಯಮ, 1882;
ಭಾರತೀಯ ಕರಾರು ಅಧಿನಿಯಮ, 1872;
ನಿರ್ದಿಷ್ಟ ಪರಿಹಾರಗಳ ಅಧಿನಿಯಮ, 1963;
ಭಾರತದ ಸಂವಿಧಾನ; ಮತ್ತು
ಕರ್ನಾಟಕ ಬಾಡಿಗೆ ಅಧಿನಿಯಮ, 1999.

ಭಾಗ – ಬಿ : ದಂಡ ಪ್ರಕ್ರಿಯಾ ಸಂಹಿತೆ, 1973;
ಭಾರತೀಯ ದಂಡ ಸಂಹಿತೆ, 1860; ಮತ್ತು
ಭಾರತೀಯ ಸಾಕ್ಷ್ಯ ಅಧಿನಿಯಮ, 1872.

ಭಾಗ – ಸಿ : ಸಾಮಾನ್ಯ ಜ್ಞಾನ – ತಾರ್ಕಿಕ ಮತ್ತು
ಮನೋಸಾಮರ್ಥ್ಯ ಪರೀಕ್ಷೆ.

(ಬಿ) **ಮುಖ್ಯ ಪರೀಕ್ಷೆ:**

**(i) ಭಾಷಾಂತರ ಪತ್ರಿಕೆ** ( ಗರಿಷ್ಠ ಅಂಕಗಳು 100)

ಒಂದು ಭಾಷಾಂತರ ಪತ್ರಿಕೆಯಿದ್ದು, ಅಭ್ಯರ್ಥಿಗಳು ಇಂಗ್ಲಿಷ್‌ನಿಂದ ಕನ್ನಡಕ್ಕೆ ಮತ್ತು ಕನ್ನಡದಿಂದ ಇಂಗ್ಲೀಷಿಗೆ ಕೆಲವು ಉದ್ಧೃತ ಭಾಗಗಳನ್ನು ಭಾಷಾಂತರಿಸುವ ಅಗತ್ಯವಿರುತ್ತದೆ. ಉದ್ಧೃತ ಭಾಗಗಳನ್ನು (1) ಹೇಳಿಕೆಗಳು, (2) ತೀರ್ಪುಗಳು ಮತ್ತು (3) ದಸ್ತಾವೇಜುಗಳಿಂದ ಆರಿಸಿ ತೆಗೆದುಕೊಳ್ಳಲಾಗಿರುತ್ತದೆ.

**(ii) ಕಾನೂನು ಪತ್ರಿಕೆ– I** (ಗರಿಷ್ಠ ಅಂಕಗಳು 100)

ಸಿವಿಲ್ ಪ್ರಕ್ರಿಯಾ ಸಂಹಿತೆ, 1908;
ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973;
ಭಾರತೀಯ ಸಾಕ್ಷ್ಯ ಅಧಿನಿಯಮ, 1872;
ವಾದ ತತ್ವಗಳು ಮತ್ತು ಭಾರತ ಸಂವಿಧಾನ.

(iii) **ಕಾನೂನು ಪತ್ರಿಕೆ– II** (ಗರಿಷ್ಠ ಅಂಕಗಳು 100)

ಸಿವಿಲ್ ಪ್ರಕರಣಗಳಲ್ಲಿ ವಿವಾದಾಂಶಗಳನ್ನು ರೂಪಿಸುವುದು ಮತ್ತು ತೀರ್ಪುಗಳನ್ನು ಬರೆಯುವುದು.

(iv) **ಕಾನೂನು ಪತ್ರಿಕೆ– III (ಗರಿಷ್ಠ ಅಂಕಗಳು 100)**

ಕ್ರಿಮಿನಲ್ ಪ್ರಕರಣಗಳಲ್ಲಿ ವಿವಾದಾಂಶಗಳನ್ನು ರೂಪಿಸುವುದು ಮತ್ತು ತೀರ್ಪುಗಳನ್ನು ಬರೆಯುವುದು.

(ಸಿ) **ಮೌಖಿಕ – ಪರೀಕ್ಷೆ (ಗರಿಷ್ಠ ಅಂಕಗಳು 100)**

ಅಭ್ಯರ್ಥಿಗಳ ಸಾಮಾನ್ಯ ಜ್ಞಾನ, ಕಾನೂನು ತತ್ವಗಳ ಗ್ರಹಿಕೆ ಮತ್ತು ಸಿವಿಲ್ ನ್ಯಾಯಾಧೀಶರಾಗಿ ನೇಮಕವಾಗಲು ಅವರಿಗಿರುವ ಅರ್ಹತೆಗಳನ್ನು ಪರೀಕ್ಷಿಸಲಾಗುವುದು.

(ಡಿ) **ಕಂಪ್ಯೂಟರ್ ಜ್ಞಾನದ ಪರೀಕ್ಷೆ** (ಗರಿಷ್ಠ ಅಂಕಗಳು 25)

ಕಂಪ್ಯೂಟರ್ ಜ್ಞಾನದ ಪರೀಕ್ಷೆಯು 25 ಅಂಕಗಳಿಗೆ ಇರುತ್ತದೆ. ಅಭ್ಯರ್ಥಿಗಳು ಗಳಿಸಿದ ಈ ಅಂಕಗಳನ್ನು ಅವರ ಅರ್ಹತೆಯನ್ನು ನಿಶ್ಚಿತಪಡಿಸಲು ಪರಿಗಣಿಸಲಾಗುತ್ತದೆ ಮತ್ತು ಅಭ್ಯರ್ಥಿಗಳು ಕಂಪ್ಯೂಟರ್ ಜ್ಞಾನದ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು, ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳಿಗೆ ಸೇರಿಸಲಾಗುವುದಿಲ್ಲ.

**ಸೂಚನೆ: (ಬಿ) ಮತ್ತು (ಸಿ) ಗೆ ಸಂಬಂಧಪಡುವಷ್ಟರ ಮಟ್ಟಿಗೆ, ಕನ್ನಡದಲ್ಲಿ ಉತ್ತರಗಳನ್ನು ಬರೆಯಲು ಬಯಸುವ ಅಭ್ಯರ್ಥಿಗಳು ಕನ್ನಡದಲ್ಲಿಯೇ ಉತ್ತರಿಸಬಹುದಾಗಿರುತ್ತದೆ.**

(ಇ) (i) ಪೂರ್ವಭಾವಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 50 ಅಂಕಗಳು ಮತ್ತು ಇತರರಿಗೆ 60 ಅಂಕಗಳಾಗಿರುತ್ತವೆ.

(ii) ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಪ್ರತಿಯೊಂದು ಪತ್ರಿಕೆಯಲ್ಲೂ ನಿಗದಿಪಡಿಸಿರುವ ಕನಿಷ್ಠ ಅಂಕಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ ಅಂಕಗಳು 40 ಮತ್ತು ಇತರರಿಗೆ 50 ಅಂಕಗಳು.

(iii) ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ನಿಗದಿಪಡಿಸಿರುವ ಕನಿಷ್ಠ ಅಂಕಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 40 ಮತ್ತು ಇತರರಿಗೆ 50 ಅಂಕಗಳು.

ಪರಂತು,

(i) ಲಿಖಿತ ಪರೀಕ್ಷೆಯ ಯಾವುದೇ ಪತ್ರಿಕೆಯಲ್ಲಿ ಮೇಲೆ ನಿಗದಿಪಡಿಸಿದ ಕನಿಷ್ಠ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಗಳಿಸಿದಂಥ ಯಾವುದೇ ಅಭ್ಯರ್ಥಿಯು ಮೌಖಿಕ ಪರೀಕ್ಷೆಗೆ ಅರ್ಹರಾಗತಕ್ಕದ್ದಲ್ಲ.

(ii) ಲಿಖಿತ ಪರೀಕ್ಷೆಯ ಅಥವಾ ಮೌಖಿಕ ಪರೀಕ್ಷೆಯ ಯಾವುದೇ ಪತ್ರಿಕೆಯಲ್ಲಿ ಮೇಲೆ ನಿಗದಿಪಡಿಸಿದ ಕನಿಷ್ಠ ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಗಳಿಸಿದಂಥ ಯಾವುದೇ ಅಭ್ಯರ್ಥಿಯು ಸಿವಿಲ್ ನ್ಯಾಯಾಧೀಶರಾಗಿ ನೇಮಕವಾಗುವುದಕ್ಕೆ ಅರ್ಹರಾಗತಕ್ಕದ್ದಲ್ಲ.

(2) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) ನಿಯಮಗಳು, 2004ರ 5ನೇ ನಿಯಮದ ಉಪ–ನಿಯಮ II (1) (ಇ) (ii) ಮತ್ತು ತಿದ್ದುಪಡಿ ನಿಯಮಗಳು, 2011 ಮತ್ತು 2015ರ ಮೇರೆಗೆ ಮೌಖಿಕ ಪರೀಕ್ಷೆಗೆ ಅರ್ಹರಾಗಿರುವಂಥ ಅಭ್ಯರ್ಥಿಗಳಿಂದ ಸಾಧ್ಯವಾಗಬಹುದಾದಷ್ಟು, ಪ್ರತಿ ಮೀಸಲಾತಿ ಪ್ರವರ್ಗದಲ್ಲಿನ ಖಾಲಿ ಸ್ಥಾನಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ 7(ಏಳು) ಪಟ್ಟು ಅಭ್ಯರ್ಥಿಗಳನ್ನು, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ, ಮೌಖಿಕ ಪರೀಕ್ಷೆಗೆ ಕರೆಯತಕ್ಕದ್ದು.

**ನೇಮಕಾತಿಯ ಅನರ್ಹತೆ:–** ಯಾವುದೇ ವ್ಯಕ್ತಿಯು –

(ಎ) ಭಾರತೀಯ ಪೌರನಾಗಿರದ ಹೊರತು;

(ಬಿ) ಯಾವುದೇ ಉಚ್ಚ ನ್ಯಾಯಾಲಯ, ಸರ್ಕಾರ ಅಥವಾ ಶಾಸನಾತ್ಮಕ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಇತರೆ ಉದ್ಯೋಗದಾತ ಸಂಸ್ಥೆಯ ಸೇವೆಯಿಂದ ವಜಾಗೊಂಡಿದ್ದಲ್ಲಿ ಅಥವಾ ತೆಗೆದುಹಾಕಿದ್ದಲ್ಲಿ ಅಥವಾ ಕಡ್ಡಾಯ ನಿವೃತ್ತಿಯಾಗಿದ್ದಲ್ಲಿ;

(ಸಿ) ನೈತಿಕ ಅಧಃಪತನಕ್ಕೆ ಸೇರುವ ಯಾವುದೇ ಅಪರಾಧದಲ್ಲಿ ಅಪರಾಧಿಯೆಂದು ನಿರ್ಣೀತನಾಗಿದ್ದಲ್ಲಿ ಅಥವಾ ಉಚ್ಚ ನ್ಯಾಯಾಲಯ ಅಥವಾ ಕೇಂದ್ರ ಲೋಕಸೇವಾ ಆಯೋಗ ಅಥವಾ ಯಾವುದೇ ರಾಜ್ಯ ಲೋಕಸೇವಾ ಆಯೋಗಗಳು ನಡೆಸುವ ಪರೀಕ್ಷೆಗಳಿಗೆ ಹಾಜರಾಗುವುದರಿಂದ ಅಥವಾ ಇವು ನಡೆಸುವ ನೇಮಕಾತಿಗಳಿಗೆ ಶಾಶ್ವತವಾಗಿ ಅನರ್ಹಗೊಂಡಿರುವ ಅಥವಾ ಅನರ್ಹರಾಗಿರುವ ಅಥವಾ ಯಾವುದೇ ಬಾರ್ ಕೌನ್ಸಿಲ್‌ನ ನೋಂದಣಿ ಪಟ್ಟಿಯಿಂದ ತೆಗೆದುಹಾಕಲ್ಪಟ್ಟಿದ್ದಲ್ಲಿ;

(ಡಿ) ಅರ್ಜಿದಾರನನ್ನು, ನ್ಯಾಯಿಕ ಹುದ್ದೆಗೆ ಅನರ್ಹನೆಂದು ರುಜುವಾತುಪಡಿಸಿ, ಬಾರ್ ಕೌನ್ಸಿಲ್ ಅಥವಾ ಆಯ್ಕೆ ಪ್ರಾಧಿಕಾರದ ಅಭಿಪ್ರಾಯದಲ್ಲಿ ಶಿಸ್ತುಪಾಲನಾ ಪ್ರಾಧಿಕಾರವಾಗಿರುವ ಯಾವುದೇ ಪ್ರಾಧಿಕಾರವು ಯಾವುದೇ ದಂಡ ಅಥವಾ ದಂಡನೆಯನ್ನು ವಿಧಿಸಲಾಗಿದ್ದಲ್ಲಿ;

(ಇ) ತನ್ನ ಅಭ್ಯರ್ಥಿಕೆಗೆ ಸಂಬಂಧಿಸಿದಂತೆ ಯಾವುದೇ ರೂಪದಲ್ಲಿ ನೇಮಕಾತಿ ಪ್ರಾಧಿಕಾರವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವಿಸಿದ್ದಲ್ಲಿ;

(ಎಫ್) ಅಭ್ಯರ್ಥಿಯು ಇಬ್ಬರು ಪತ್ನಿ/ಪತಿಯರನ್ನು ವಿವಾಹವಾಗಿದ್ದಲ್ಲಿ.

–ಸೇವೆಯ ನೇಮಕಾತಿಗೆ ಅರ್ಹರಾಗಿರತಕ್ಕದ್ದಲ್ಲ.

**ಪ್ರೊಬೇಷನ್:-**

ಆಯ್ಕೆಯಾದ ಅಭ್ಯರ್ಥಿಗಳು, ಪ್ರಾರಂಭದಲ್ಲಿ ಎರಡು ವರ್ಷಗಳ ಅವಧಿಗೆ ಅಥವಾ ವಿಸ್ತರಿಸಬಹುದಾದ ಅವಧಿಗೆ ಪ್ರೊಬೇಷನಲ್ಲಿರುತ್ತಾರೆ ಹಾಗೂ ಕರ್ನಾಟಕ ಸಿವಿಲ್ ಸೇವಾ (ಪ್ರೊಬೇಷನ್) ನಿಯಮಗಳು, 1977ರ ಉಪಬಂಧಗಳು, ಹಾಗೆ ನೇಮಕಗೊಂಡ ವ್ಯಕ್ತಿಗಳಿಗೆ ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು. ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡ ಅಭ್ಯರ್ಥಿಗಳು ಸೇವೆಯ ಪ್ರೊಬೇಷನಲ್ಲಿರುವಾಗ –

(ಎ) ಒಂದು ವರ್ಷಕ್ಕಿಂತ ಕಡಿಮೆಯಿರದ ಅಥವಾ ಉಚ್ಚ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಹೆಚ್ಚಿನ ಅವಧಿಯ ಅಂಥ ತರಬೇತಿಯನ್ನು ಪಡೆದುಕೊಳ್ಳತಕ್ಕದ್ದು, ಹಾಗೂ

(ಬಿ) ಅವನು/ಅವಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರದಿದ್ದರೆ ಕರ್ನಾಟಕ ಸಿವಿಲ್ ಸೇವಾ (ಸೇವೆಗಳು ಹಾಗೂ ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅನುಸಾರವಾಗಿ ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.

ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು http://karnatakajudiciary.kar.nic.in/recruitment.asp. ವೆಬ್‌ಸೈಟ್ ನ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. **ಆನ್‌ಲೈನ್** ಅನ್ನು ಹೊರತುಪಡಿಸಿ ಇತರ ಯಾವುದೇ ವಿಧಾನದಲ್ಲಿ ಕಳುಹಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಈ ಮುಂದೆ ಹೇಳಿರುವಂತೆ ಶುಲ್ಕವನ್ನು ತುಂಬುವುದು:

(i) **ಆನ್‌ಲೈನ್ ಮೂಲಕ ಶುಲ್ಕ ಸಂದಾಯ:** ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ, ಅರ್ಜಿ ಸಲ್ಲಿಸಿದ ಮೇಲೆ, ಆನ್‌ಲೈನ್‌ನಲ್ಲಿಯೇ ಸ್ಟೇಟ್ ಬ್ಯಾಂಕ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ http://www.onlinesbi.com/prelogin/icollecthome.htmಗೆ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**ಅಥವಾ**

(ii) **ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ:** ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಸ್ಟೇಟ್ ಬ್ಯಾಂಕ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ http://www.onlinesbi.com/prelogin/icollecthome.htm ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ರೀಡರ್–ಅಡೋಬ್ ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದ್ದು)

**ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ನೋಂದಾಯಿಸಲು/ಸಲ್ಲಿಸಲು ಕೊನೆಯ ದಿನಾಂಕ 01.03.2017 (ರಾತ್ರಿ 11.59 ಗಂಟೆ) ಚಲನ್ ಮೂಲಕ ಶುಲ್ಕ ಸಂದಾಯ ಮಾಡಲು ದಿನಾಂಕ: 04.03.2017 ಕೊನೆಯ ದಿನಾಂಕವಾಗಿರುತ್ತವೆ.**

**(1) ಪೂರ್ವಭಾವಿ ಪರೀಕ್ಷೆ:** ಅಭ್ಯರ್ಥಿಯು, ಆನ್‌ಲೈನ್‌ನಿಂದ ಜನರೇಟ್ ಆದ ಚಲನ್ ಅನ್ನು ಬಳಸಿ 500/– ರೂ.ಗಳ ಮೊತ್ತವನ್ನು (ಐದುನೂರು ರೂಪಾಯಿಗಳು ಮಾತ್ರ) ಸಂದಾಯ ಮಾಡತಕ್ಕದ್ದು. ಆದರೆ, ಪ.ಜಾ/ಪ.ಪಂ/ ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು ಸಂದಾಯ ಮಾಡಬೇಕಾದ ಶುಲ್ಕವು 250/– ರೂಪಾಯಿ (ಇನ್ನೂರೈವತ್ತು ರೂಪಾಯಿಗಳು ಮಾತ್ರ) ಆಗಿರತಕ್ಕದ್ದು.

(2) ಪೂರ್ವಭಾವಿ ಪರೀಕ್ಷೆಯಲ್ಲಿ ಯಶಸ್ವಿಯಾದ ಪ್ರತಿಯೊಬ್ಬ ಅಭ್ಯರ್ಥಿಯು, **ಮುಖ್ಯ ಪರೀಕ್ಷೆಗೆ ಹಾಜರಾಗಲು,** ಪೂರ್ವಭಾವಿ ಪರೀಕ್ಷೆಯ ಫಲಿತಾಂಶವನ್ನು ಘೋಷಿಸಿದ ದಿನಾಂಕದಿಂದ 15(ಹದಿನೈದು) ದಿನಗಳೊಳಗೆ, **ಮುಖ್ಯ ಪರೀಕ್ಷಾ ಶುಲ್ಕವನ್ನು** ಸಂದಾಯ ಮಾಡತಕ್ಕದ್ದು, ಹಾಗೆ ಸಂದಾಯ ಮಾಡಲು ತಪ್ಪಿದಲ್ಲಿ, ಅಂಥ ಅಭ್ಯರ್ಥಿಯ ಅಭ್ಯರ್ಥಿಕೆಯನ್ನು ಮುಖ್ಯ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಪಡೆದ ಚಲನ್ ಅನ್ನು ಬಳಸಿ 1000/– **ರೂಪಾಯಿಗಳ (ಒಂದು ಸಾವಿರ ರೂಪಾಯಿಗಳು ಮಾತ್ರ)** ಮೊತ್ತವನ್ನು ಸಂದಾಯ ಮಾಡತಕ್ಕದ್ದು. ಆದರೆ, ಪ.ಜಾ/ಪ.ಪಂ/ಪ್ರವರ್ಗ–I ಕ್ಕೆ ಸೇರಿದ ಅಭ್ಯರ್ಥಿಗಳು ಸಂದಾಯ ಮಾಡಬೇಕಾದ ಶುಲ್ಕವು 500/– **ರೂಪಾಯಿ (ಐದು ನೂರು ರೂಪಾಯಿಗಳು ಮಾತ್ರ)** ಆಗಿರತಕ್ಕದ್ದು.

(ಎ) ಒಮ್ಮೆ ಸಂದಾಯ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭಗಳಲ್ಲೂ ಮರುಪಾವತಿಸತಕ್ಕದ್ದಲ್ಲ.

(ಬಿ) ಮೌಖಿಕ ಪರೀಕ್ಷೆಗೆ ಕರೆಯಲ್ಪಡುವ ಅಭ್ಯರ್ಥಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಆವರಣ, ಬೆಂಗಳೂರು ಇಲ್ಲಿಗೆ ತಮ್ಮ ಸ್ವಂತ ಖರ್ಚಿನಲ್ಲಿ ನೇಮಕಾತಿ ಸಮಿತಿ ಮುಂದೆ ಹಾಜರಾಗಬೇಕು.

(ಸಿ) ಆನ್‌ಲೈನ್ ಹೊರತುಪಡಿಸಿ ಇತರ ಯಾವುದೇ ವಿಧಾನದಲ್ಲಿ ಕಳುಹಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ಡಿ) ಸೇವಾ ನಿರತ ಅಭ್ಯರ್ಥಿಗಳು ಅರ್ಜಿಗಳ ಸ್ವೀಕೃತಿಗಾಗಿ ನಿಗದಿಪಡಿಸಲಾದ ದಿನಾಂಕ ಹಾಗೂ ಸಮಯವನ್ನು ಮೀರದಂತೆ ಆನ್‌ಲೈನ್‌ನಲ್ಲಿ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ನೀಡಲಾದ "ನಿರಾಕ್ಷೇಪಣಾ ಪ್ರಮಾಣಪತ್ರ'' ವನ್ನು ಹೊಂದಿರತಕ್ಕದ್ದು.

(ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-I/IIಎ/IIಬಿ/IIIಎ/IIIಬಿ ಅಡಿಯಲ್ಲಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು.

(ಎಫ್) ಗ್ರಾಮೀಣ / ವಿಕಲಚೇತನರು / ಮಾಜಿ ಸೈನಿಕರು/ ಕನ್ನಡ ಮಾಧ್ಯಮ ಅಭ್ಯರ್ಥಿಗಳ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು. ಗ್ರಾಮೀಣ ಪ್ರವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಕೆನೆಪದರ ಪ್ರಮಾಣಪತ್ರವನ್ನು (Creamy Layer Certificate) ಹೊಂದಿರತಕ್ಕದ್ದು.

(ಜಿ) ಮೇಲ್ಕಂಡ ಕ್ರಮ ಸಂಖ್ಯೆ (ಡಿ), (ಇ) ಹಾಗೂ (ಎಫ್) ಅಡಿಯಲ್ಲಿ ಪ್ರಯೋಜನಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಕ್ಷಮ ಪ್ರಾಧಿಕಾರಿಗಳು ನೀಡಿದ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು ಮತ್ತು ಆಯ್ಕೆ ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ಹಾಜರು ಪಡಿಸುವುದು.

(ಎಚ್) ಸ್ಥಳೀಯ ವೃಂದದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು, ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕಾಗಿ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪತ್ರ ನೀಡಿಕೆ) ನಿಯಮಗಳು, 2013ರ ಅಡಿಯಲ್ಲಿ ನಿಗದಿಪಡಿಸಲಾದಂತೆ, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಸಕ್ಷಮ ಪ್ರಾಧಿಕಾರವು ನೀಡಿದ ಸಂಬಂಧಪಟ್ಟ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು ಮತ್ತು ಆಯ್ಕೆ ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ಹಾಜರು ಪಡಿಸುವುದು.

(ಐ) ಮಾಜಿ ಸೈನಿಕ ವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಮಿಲಿಟರಿ ಸೇವೆಯಿಂದ ಬಿಡುಗಡೆ ಮಾಡಲಾದ ಅಥವಾ ವಿಮುಕ್ತಿಗೊಳಿಸಿದ ಪ್ರಮಾಣಪತ್ರವನ್ನು ಹೊಂದಿರತಕ್ಕದ್ದು ಮತ್ತು ಆಯ್ಕೆ ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ಹಾಜರು ಪಡಿಸುವುದು.

(ಜೆ) ಮೌಖಿಕ ಪರೀಕ್ಷೆಯ ಸಮಯದಲ್ಲಿ ದಾಖಲೆಗಳ ಪರಿಶೀಲನೆಗಾಗಿ ಕರೆಯಲ್ಪಡುವ ಅಭ್ಯರ್ಥಿಗಳು, ಶೈಕ್ಷಣಿಕ ವಿದ್ಯಾರ್ಹತೆ (ಜನ್ಮ ದಿನಾಂಕವನ್ನು ತೋರಿಸಲು ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ, ಪದವಿ ಹಾಗೂ ಕಾನೂನು ಪದವಿ ಪ್ರಮಾಣಪತ್ರಗಳು ಮತ್ತು ಅಂಕಪಟ್ಟಿಗಳು), ಜಾತಿ ಪ್ರಮಾಣ ಪತ್ರ, ಗ್ರಾಮೀಣ/ ವಿಕಲಚೇತನರು / ಮಾಜಿ ಸೈನಿಕರು / ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದಂತೆ ಕ್ಲೇಮು ಮಾಡಿದ ಮೀಸಲಾತಿಗಳು ಮತ್ತು ಸ್ಥಳೀಯ ವೃಂದಕ್ಕೆ ಕ್ಲೇಮು ಮಾಡಿದ ಮೀಸಲಾತಿಗೆ ಸಂಬಂಧಿಸಿದಂತೆ ಅಗತ್ಯ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

(ಕೆ) ಅಭ್ಯರ್ಥಿಯು ಉತ್ತಮ ನಡತೆಯ ಎರಡು (ಅವನು/ಅವಳು ಓದಿದ ಸಂಸ್ಥೆ/ಕಾಲೇಜಿನ ಪ್ರಾಂಶುಪಾಲರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಮತ್ತು ಅವನು/ಅವಳು ಚೆನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ ಒಬ್ಬ ಗೌರವಾನ್ವಿತ ವ್ಯಕ್ತಿಯಿಂದ ಪಡೆದ ಇನ್ನೊಂದು) ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು. **ಪರಿಶೀಲನೆ ಮಾಡುವಾಗ, ಅರ್ಜಿದಾರನು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ, ಆಗ ಅವರ ಅಭ್ಯರ್ಥಿಕೆಯು ತಿರಸ್ಕೃತವಾಗುತ್ತದೆ ಹಾಗೂ ಅವರು ಸುಳ್ಳು ಮಾಹಿತಿ ನೀಡಿದ್ದಕ್ಕಾಗಿ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೂ ಸಹಾ ಗುರಿಯಾಗಬೇಕಾಗುತ್ತದೆ.**

ಆದೇಶಾನುಸಾರ,

**ಸಹಿ/-**

**ಅಶೋಕ್ ಜಿ. ನಿಜಗಣ್ಣವರ್**

ಕಾರ್ಯದರ್ಶಿ,

ಸಿವಿಲ್ ನ್ಯಾಯಾಧೀಶರುಗಳ ನೇಮಕಾತಿ ಸಮಿತಿ,

ಕರ್ನಾಟಕ ಉಚ್ಚ ನ್ಯಾಯಾಲಯ,

ಬೆಂಗಳೂರು-560 001.

**OFFICE OF THE REGISTRAR GENERAL, HIGH COURT OF KARNATAKA, AMBEDKAR VEEDHI, BENGALURU-560 001**

## NOTIFICATION

**NO.CJRC.1/2017, BENGALURU, DATED 1ST DAY OF FEBRUARY, 2017**

**RECRUITMENT OF CANDIDATES TO THE POST OF CIVIL JUDGES**

**LAST DATE FOR ONLINE RECEIPT OF APPLICATIONS: 01.03.2017**

It is hereby notified that under the provisions of **Karnataka Judicial Service (Recruitment) Rules, 2004 and Amendment Rules, 2011 and 2015, the High Court of Karnataka** invites **Online applications** for direct recruitment to **167** posts of Civil Judges [the then Civil Judge (Junior Division)] which includes the existing and consequential vacancies.

**Minimum Qualification and Age Limit for : -**
**A. Direct Recruitment:-**

1. Must be holder of a degree in Law granted by a University established by Law in India and must have been enrolled as an Advocate.

2. Must not have completed as on the last date fixed for receipt of applications, 38 years of age in the case of candidates belonging to Scheduled Caste or Scheduled Tribe and 35 years of age in the case of others.

3. For ex-servicemen candidates, relaxation of three years in the upper age limit.

**B. Recruitment of In-service Candidates:-**

1. Must be holder of a degree in Law granted by a University established by Law in India.

2. Must not have completed as on the last date fixed for receipt of applications, 43 years of age in the case of candidates belonging to Scheduled Caste or Scheduled Tribe and 40 years of age in the case of others.

3. All In-service candidates having required qualification working in the High Court and in the District Judiciary irrespective of their cadres are eligible to apply for the post of Civil Judge.

4. Assistant Public Prosecutors-cum-Additional Government Pleaders who are working in the Department of Prosecutions and Government Litigation are also eligible to apply for the post of Civil Judges.

**Note:** 1. Direct recruitment to the cadre of Civil Judges is subject to any order made under Article 16(4) or 16(4A) of the Constitution of India, providing reservation for Scheduled Castes, Scheduled Tribes and other backward classes.

2. For direct recruitment to the cadre of Civil Judges 1% (One percent) reservation has been provided for Orthopedic disabled persons (persons having disability with one arm (OA)/one leg (OL)/both legs (BL), subject to the prescribed qualifications.

**Scale of Pay :-** Rs. 27700-770-33090-920-40450-1080-44770

**Classification of Vacancies under Residual Parent Cadre**

| Category | Un-reserved General | Women Candidate | Kannada Medium | Rural Candidate | Ex-service Men | Physically Challenged | TOTAL |
|---|---|---|---|---|---|---|---|
| S.C. | 4 | 4 | 1 | 3 | 1 | 2* | 15 |
| S.T. | 1 | 1 | - | - | 1 | - | 3 |
| Category-I | 1+1* | 1+3* | - | 1+2* | 1* | 1* | 11 |
| Category-II (A) | 3+3* | 5+12* | 1+2* | 2+10* | 2+3* | 2* | 45 |
| Category-II(B) | - | 2+2* | 1* | 3* | 1+1* | - | 10 |
| Category-III(A) | 2 | 1 | - | - | 1 | - | 4 |
| Category-III(B) | 1 | 1 | - | 2+2* | 1* | 1 | 8 |
| General Merit | 10 | 13 | 3 | 11 | 4 | 2+2* | 45 |
| TOTAL | 26 | 45 | 8 | 36 | 16 | 10 | 141 |

**CLASSIFICATION Of VACANCIES UNDER "LOCAL CADRE" (i.e. Reservation for Hyderabad-Karnataka region candidates under Art.371(J) of the Constitution**

| Category | Un – reserved General | Women Candidate | Kannada Medium | Rural Candidate | Ex-service Men | Physically Challenged | TOTAL |
|---|---|---|---|---|---|---|---|
| S.C. | 1 | 1 | - | 1 | 1 | - | 4 |
| S.T. | - | - | - | - | - | - | - |
| Category-I | 1* | - | - | 1 | - | - | 2 |
| Category-II (A) | - | 1 | - | 1+1* | 1 | - | 4 |
| Category-II(B) | 1* | - | - | 1 | - | - | 2 |
| Category-III(A) | - | 1 | - | - | - | - | 1 |
| Category-III(B) | - | - | - | 1 | - | - | 1 |
| General Merit | 2 | 3 | 1 | 3 | 1 | 1+1* | 12 |
| TOTAL | 5 | 6 | 1 | 9 | 3 | 2 | 26 |

***Mentioning of star against notified vacancies indicate that particular vacancy is carried forward as backlog.**

**NOTE:-** The above classification has been made keeping in view the relevant Government Orders in force.

**Method of Recruitment:-** By direct recruitment on the basis of aggregate marks obtained in a competitive examination (Main Examination and Viva-Voce) conducted by the High Court, consisting of 3 stages i.e., (a) Preliminary Examination, (b) Main Examination and (c) Viva-Voce. The marks secured in the Preliminary Examination is considered only for Eligibility for the Main Examination.

**(a) PRELIMINARY EXAMINATION:-**

The Preliminary Examination shall be conducted by way of Objective Type Question Paper consisting of 100 marks and the syllabi for the said examination shall be the following, namely:-

Part-A – Code of Civil Procedure, 1908;
Negotiable Instruments Act, 1981;
Transfer of Property Act, 1882;
Indian Contract Act, 1872;
Specific Relief Act, 1963;
Indian Constitution; and
Karnataka Rent Act, 1999.

Part-B – Code of Criminal Procedure, 1973;
Indian Penal code, 1860; and
Indian Evidence Act, 1872.

Part-C – General knowledge – Test of reasoning and mental ability.

**(b)MAIN EXAMINATION:-**

(i) **Translation Paper** (Maximum Marks 100)

There will be one translation paper and the candidates will be required to translate passages in English into Kannada and Kannada into English. The Passages will be from (1) Depositions, (2) Judgments and (3) Documents.

(ii) **Law Paper I** (Maximum Marks 100)
The Code of Civil Procedure, 1908;
The Code of Criminal Procedure, 1973;
The Indian Evidence Act, 1872;
Principles of Pleading and the Constitution of India.

(iii) **Law Paper II** (Maximum Marks 100)
Framing of Issues and writing of Judgments in Civil Cases.

(iv) **Law Paper III** (Maximum Marks 100)
Framing of Charges and writing of Judgments in Criminal cases.

**(c) VIVA-VOCE (Maximum Marks 100)**

The candidates General Knowledge, grasp of principles of law and suitability for appointment as Civil Judge shall be tested.

**(d) COMPUTER TEST (Maximum Marks 25)**

The test of knowledge of computers shall carry maximum 25 marks and such marks secured by the candidate shall be considered for ascertaining the suitability and computer knowledge of the candidates and shall not be aggregated to the total marks obtained in the written examination and Viva-Voce.

**Note: Regarding (b) and (c), such of those candidates who desire to answer in Kannada may do so.**

(e)(i) Minimum marks for pass in the Preliminary Examination shall be 50 for candidates belonging to Scheduled Castes and Scheduled Tribes and 60 for others."

(ii) Minimum marks for pass in each paper of the Written Examination shall be 40 for candidates belonging to Scheduled Castes and Scheduled Tribes and 50 for others.

(iii) Minimum marks for pass in the Viva-Voce shall be 40 for candidates belonging to Scheduled Castes and Scheduled Tribes and 50 for others.

Provided that no candidate who has secured less than the minimum marks specified above:

(i) in any paper of the Written Examination shall be eligible for Viva-Voce.

(ii) in any paper of the Main Written Examination or in viva-voce shall be eligible for appointment as Civil Judge.

(2) From among the candidates who are eligible for Viva-Voce as per sub-rule II (1) (e) (ii) of Rule 5 of the Karnataka Judicial Service (Recruitment) Rules, 2004 and Amendment Rules, 2011 and 2015, as far as may be, such number of candidates as is equal to 7 (seven) times the number of vacancies notified, having regard to the number of vacancies in each reserved category, selected in the order of merit, shall be called for Viva-Voce examination.

**Disqualification for Appointment:-** No person shall be eligible for appointment to the service –

(a) unless he is a Citizen of India;

(b) if he is dismissed or removed from service or compulsorily retired by any High Court, Government or Statutory or Local Authority or other employer;

(c) if he has been convicted of an offence involving moral turpitude or who is or has been permanently debarred or disqualified by the High Court or the Union Public Service Commission or any State Public Service Commission from appearing for examinations or selections conducted by it or has been removed from its roll by any Bar Council;

(d) if any penalty or punishment has been imposed by the Bar Council or any disciplinary authority which in the opinion of selecting authority, makes the applicant unsuitable for a judicial post;

(e) if he directly or indirectly influences the recruiting authority by any means for his candidature;

(f) if the marital status of the candidate is bigamous.

**Probation:-** A candidate selected will be initially on probation for two years or for extended period and the provisions of Karnataka Civil Services (Probation) Rules, 1977, shall mutatis mutandis, apply to persons so appointed. The candidates appointed as Civil Judge, during the period of probation, shall –

(a) undergo such training for a period not less than one year or more as specified by the High Court, and

(b) pass the Kannada Language Examination conducted by the Karnataka Public Service Commission in accordance with the Karnataka Civil Services (Services and Kannada Language Examinations) Rules, 1974, if he/she has not already passed it.

Those who are desirous of applying for the said posts are required to fill the application **online** on the website http://karnatakajudiciary.kar.nic.in/recruitment.asp. Applications sent by any other mode other than online will not be considered and to remit the fee as hereunder:

(i) Online Payment: On submission of online application the candidate shall make the online payment of application fee by SBI online payment gateway to http://www.onlinesbi.com/prelogin/icollecthome.htm

**Or**

(ii) Challan Form: On submission of online application the candidate shall download the challan through the SBI online payment gateway link http://www.onlinesbi.com/prelogin/icollecthome.htm in PDF format and shall remit the prescribed fee in any branch of SBI. (System need to support PDF reader-like Adobe, Acrobat)

**The Last Date for register/submit Online Applications:**
**01.03.2017 (11.59 PM)**
**The Last Date for payment of fee through Challan: 04.03.2017**

**(1) Preliminary Examination** Candidate shall remit an amount of **Rs.500/- (Rupees Five hundred only)** using the challan generated online. But, in the case of candidate belonging to SC/ST/Category-I, the fee payable shall be **Rs.250/- (Rupees Two fifty only)**.

**(2) Main Examination fee shall be** payable by each candidate who is successful in the Preliminary Examination and eligible to appear for the Main Examination immediately within 15 (Fifteen) days from the date of announcing the result of the Preliminary Examination, failing which, their candidature will not be considered for Main Examination. The candidate shall remit an amount of **Rs.1000/- (Rupees One thousand only)** using the challan generated online. But, in the case of candidate belonging to SC/ST/Category-I, the fee payable shall be **Rs.500/- (Rupees Five hundred only)**.

a) Fee once paid shall not be refunded under any circumstances.

b) Those candidates called for Viva-Voce will have to appear before the Recruitment Committee in the premises of the High Court of Karnataka, Bengaluru, at their cost.

c) Applications sent in any other mode except **online** will not be considered.

d) The in-service candidates shall submit their applications online not later than the date and time fixed for receipt of applications and should possess the "No Objection Certificate" issued by the concerned Authority.

e) Candidates Claiming Reservations under SC/ ST, Category – I / II A / II B / III A / III B shall possess the certificate in the form as prescribed by the Government of Karnataka, and issued by the competent Authority.

f) Candidates claiming reservation under Rural / Physically Handicapped / Ex – Servicemen / Kannada Medium candidates shall posses the Certificates issued by Competent Authorities. General Merit candidates claiming reservation under Rural Category shall **possess** Creamy Layer Certificate.

g) The candidates claiming benefits under Sl. No.(d), (e) and (f) above shall possess the relevant certificates, issued by the Competent Authorities on or before the last date of applying on line and to produce the same whenever directed by the Authority to do so.

h) Candidates claiming reservation under Local Cadre shall possess the relevant certificate issued by the Competent Authority on or before the last day of applying online as prescribed under The Karnataka Public Employment (Reservation in appointment for Hyderabad-Karnataka Region) (Issue of Eligibility Certificates) Rules, 2013 **and to produce the same whenever the authority directs to do so.**

i) Candidates claiming reservation under Ex-Servicemen shall possess the certificate of release or discharge from military Service and to produce the same whenever directed by the Authority to do so.

j) The candidate shall furnish two character certificates of good character (one from the Principal of the Institution/College in which he/she last studied with study details and another from a respectable person not being a relative who is well acquainted with him/her.

k) Candidates called for the document verification at the time of Viva-Voce shall furnish the necessary original documents with regard to Educational Qualification (SSLC or equivalent examination certificate to show the Date of Birth, Degree and Law Degree Convocation Certificates and Marks Cards), Caste, reservations claimed with regard to Rural / Physically Handicapped / Ex – Servicemen / Kannada Medium and reservation claimed for "Local Cadre" for verification. **On verification, if the information so furnished by the applicant in the application is found to be false, then their candidature is liable for rejection and also they are liable for Criminal Prosecution for furnishing false information.**

**BY ORDER,**

**Sd/-**

**ASHOK G. NIJAGANNAVAR**
SECRETARY,
CIVIL JUDGES RECRUITMENT COMMITTEE,
**HIGH COURT OF KARNATAKA,**
BENGALURU-560 001.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಹ7) 1000 ಪ್ರತಿಗಳು